ಮರುದಿನ ಇಡೀ ಹಗಲು ಅದು ರಾಜಕುಮಾರನ ಹೆಗಲ ಮೇಲೆ ಕುಳಿತು, ತಾನು ಕಂಡ ದೇಶ ವಿದೇಶಗಳ ಕಥೆಗಳನ್ನು ಆತನಿಗೆ ಹೇಳಿತು, ನೈಲ್ ನದಿಯ ದಂಡೆಗಳಲ್ಲಿ ತಮ್ಮ ಕೊಕ್ಕಿನಲ್ಲಿ ಬಂಗಾರವರ್ಣದ ಮೀನುಗಳನ್ನು ಹಿಡಿದುಕೊಂಡು ಸಾಲಾಗಿ ನಿಂತ ಕೊಕ್ಕರೆಗಳ ಬಗ್ಗೆ; ಈ ಮನುಕುಲದಷ್ಟೇ ಪುರಾತನವಾದ ಹಾಗೂ ಎಲ್ಲ ರಹಸ್ಯ ಅರಿತಿರುವ ಮರುಳುಗಾಡಿನ ಸ್ಫಿಂಕ್ಸ್ ಬಗ್ಗೆ; ಕೈಯಲ್ಲಿ ಜಪಮಾಲೆಗಳನ್ನು ಹಿಡಿದುಕೊಂಡು ಒಂಟೆಗಳ ಬದಿಗೆ ನಿಧಾನವಾಗಿ ಸಾಗುವ ವ್ಯಾಪಾರಿಗಳ ಬಗ್ಗೆ; ಚಂದ್ರನ ಮೇಲಿರುವ ಪರ್ವತಗಳ ರಾಜನ ಬಗ್ಗೆ; ತಾಳೆ ಮರಗಳ ಮೇಲೆ ಮಲಗಿರುವ ದೊಡ್ಡ ಹಸಿರು ಹಾವಿನ ಬಗ್ಗೆ; ಅಗಲವಾದ ಎಲೆಗಳ ಮೇಲೆ ತೇಲುತ್ತ ಸದಾ ಚಿಟ್ಟೆಗಳ ಜೊತೆ ಕಾದಾಡುವ ಪಿಗ್ಮಿ ಕೀಟಗಳ ಬಗ್ಗೆ; ಸ್ವಾಲೋ ಆತನಿಗೆ ಸವಿವರವಾಗಿ ಹೇಳಿತು.

'ನನ್ನ ಪ್ರೀತಿಯ ಪುಟ್ಟ ಸ್ವಾಲೋ, ನೀನು ತುಂಬ ಅದ್ಭುತವಾದ ಸಂಗತಿಗಳ ಬಗ್ಗೆ ಹೇಳುತ್ತಿ. ಆದರೆ ಸಂಕಷ್ಟಕ್ಕೊಳಗಾದ ಪುರುಷರು ಹಾಗೂ ಮಹಿಳೆಯರು ಅನುಭವಿಸುವ ಯಾತನೆಗಳು ಎಲ್ಲಕ್ಕಿಂತಲೂ ಅದ್ಭುತವಾದ ಸಂಗತಿಗಳಾಗಿವೆ. ಬಡತನಕ್ಕಿಂತ ಮಿಗಿಲಾದ ರಹಸ್ಯ ಇನ್ನೊಂದಿಲ್ಲ. ಪುಟ್ಟ ಸ್ವಾಲೋ ಹೋಗು, ನಗರದ ತುಂಬೆಲ್ಲ ಹಾರಾಡು ಅಲ್ಲಿ ಕಂಡದ್ದನ್ನೆಲ್ಲ ನನಗೆ ವಿವರಿಸು.'

ರಾಜಕುಮಾರನ ಇಚ್ಛೆಯಂತೆ ಸ್ವಾಲೋ ಆ ಮಹಾನಗರದ ಮೇಲೆಲ್ಲ ಹಾರಾಡಿತು. ಶ್ರೀಮಂತರು ತಮ್ಮ ಸುಂದರ ಮನೆಗಳಲ್ಲಿ ಮೋಜು ಮಾಡುತ್ತಿದ್ದರು. ಅದೇ ಸಮಯಕ್ಕೆ ಭಿಕ್ಷುಕರು ಅವರ ಮನೆಯ ಹೆಬ್ಬಾಗಿಲುಗಳ ಮುಂದೆ ಕುಳಿತಿದ್ದರು. ಗಾಢ ಕತ್ತಲೆ ತುಂಬಿದ ಬೀದಿಗಳಲ್ಲಿ ಹಾಗೂ ಓಣಿಗಳಲ್ಲಿ ಅದು ಹಾರಾಡಿತು. ಮುಖಗಳು ಬಿಳಿಚಿಕೊಂಡಿರುವ, ಹಸಿವೆಯಿಂದ ಬಳಲುತ್ತಿರುವ ಮಕ್ಕಳು ನಿರುತ್ಸಾಹದಿಂದ ಹೊರಗೆ ನೋಡುತ್ತ ಕುಳಿತಿದ್ದರು. ಅಲ್ಲಿರುವ ಸೇತುವೆಯ ಕಮಾನಿನ ಕೆಳಗೆ ತುಂಬಾ ಹಸಿದ ಇಬ್ಬರು ಮಕ್ಕಳು ಚಳಿಯ ಬಾಧೆ ನೀಗಿಕೊಳ್ಳಲು ಪರಸ್ಪರ ಅಪ್ಪಿಕೊಂಡು ಮಲಗಿದ್ದರು. 'ನೀವಿಲ್ಲಿ ಮಲಗಕೂಡದು' ಎಂದು ಕಾವಲುಗಾರ ಗದರಿಸಿದಾಗ ಅವರು ಎದ್ದು ಮಳೆಯಲ್ಲೇ ಅಡ್ಡಾಡತೊಡಗಿದರು.

ನಂತರ ಸ್ವಾಲೋ ಮರಳಿ ರಾಜಕುಮಾರನ ಬಳಿಗೆ ಬಂದು ತಾನು ಕಂಡದ್ದನ್ನೆಲ್ಲ ವರದಿ ಮಾಡಿತು.

'ನನ್ನ ದೇಹದ ತುಂಬೆಲ್ಲ ಚಿನ್ನದ ಹೊದಿಕೆಯಿದೆ, ಆ ಚಿನ್ನದ ತಗಡಿನ ಎಲೆಗಳನ್ನು ನೀನು ಒಂದೊಂದಾಗಿ ಹೊರತೆಗೆದು ನನ್ನ ಬಡ ಪ್ರಜೆಗಳಿಗೆ ಕೊಡು. ಬಂಗಾರವು ತಮ್ಮನ್ನು ಸಂತೋಷಪಡಿಸಬಲ್ಲುದು ಎಂದು ಎಲ್ಲ ಮನುಷ್ಯರು ಸದಾಕಾಲವೂ ಭಾವಿಸುತ್ತಾರೆ.'

ರಾಜಕುಮಾರನ ದೇಹ ಕಳೆಗುಂದಿ ಕಂದುವರ್ಣ ಎದ್ದು ಕಾಣುವವರೆಗೂ ಸ್ವಾಲೋ ಆತನ ದೇಹದ ಅಪ್ಪಟ ಚಿನ್ನದ ಎಲೆಗಳನ್ನು ಕಿತ್ತುಕೊಂಡು ಬಡವರಿಗೆ ಒಯ್ದು ಕೊಟ್ಟಿತು. ಅದರ ಪರಿಣಾಮವಾಗಿ ಎಲ್ಲ ಬಡಮಕ್ಕಳ ಮುಖಗಳು ಅರಳಿ ಗುಲಾಬಿಯಂತಾದವು, ಅವರೆಲ್ಲ ಸಂತೊಷದಿಂದ ನಗುನಗುತ್ತ ಓಣಿಗಳಲ್ಲಿ ಆಟವಾಡಿದರು. 'ಈಗ ಸಾಕಷ್ಟು ತಿಂಡಿ ತಿನಿಸು ನಮ್ಮ ಬಳಿ ಇದೆ' ಎಂದು ಅವರು ಉತ್ಸಾಹದಿಂದ ಉದ್ಗರಿಸಿದರು.

ಏತನ್ಮಧ್ಯೆ, ಎಲ್ಲೆಡೆ ಹಿಮ ಬೀಳತೊಡಗಿತು. ನಂತರ ನೀರ್ಗಲ್ಲು ಕೂಡ ಸುರಿಯತೊಡಗಿತು. ಓಣಿಗಳೆಲ್ಲ ಬೆಳ್ಳಿಯಿಂದ ಮಾಡಿದವರಂತೆ ಉಜ್ವಲವಾಗಿ ಹೊಳೆಯತೊಡಗಿದವು. ಮನೆಗಳ ಸೂರುಗಳ ಕೆಳಗೆ ಸ್ಫಟಿಕದ ಕಠಾರಿಗಳ ಹಾಗೆ ಭರ್ಫದ ಶಲಾಕೆಗಳು ನೇತಾಡತೊಡಗಿದವು. ಪ್ರತಿಯೊಬ್ಬರು ಉಣ್ಣೆಯ ಬಟ್ಟೆ ಧರಿಸಿಕೊಂಡು ಅತ್ತಿತ್ತ ಅಲೆದಾಡುತ್ತಿದ್ದರು. ಮಕ್ಕಳು ಕಡುಗೆಂಪು ವರ್ಣದ ಟೊಪ್ಪಿಗೆಗಳನ್ನು ಹಾಕಿಕೊಂಡು ಭರ್ಫದ ಮೇಲೆ ಜಾರು ಆಟ ಆಡತೊಡಗಿದರು.